ಇ) ಯಾವ ಯಾವ ಯೋಜನೆಗಳಡಿಯಲ್ಲಿ ಎಷ್ಟೆಷ್ಟು ಹಣವನ್ನು ಈ ಕೆರೆ ಕಾಮಗಾರಿಗೆ ಬಳಸಿಕೊಳ್ಳಲಾಗಿದೆ; (ಪೂರ್ಣ ವಿವರ ನೀಡುವುದು);

ಈ) ಸದರಿ ಕೆರೆ ಕಾಮಗಾರಿಯಲ್ಲಿ ಕಳಪೆ ಕಾಮಗಾರಿಯಾಗಿರುವುದು ಕಂಡು ಬಂದಿದೆಯೇ; ಬಂದಿದ್ದಲ್ಲಿ ಕಾಮಗಾರಿಯ ಕಳಪೆ ಗುಣಮಟ್ಟದ ವಿವರಗಳನ್ನು ಒದಗಿಸುವುದು;

ಉ) ಈ ಕಾಮಗಾರಿಯನ್ನು ಯಾರಿಗೆ ಗುತ್ತಿಗೆ ನೀಡಲಾಗಿದೆ ಹಾಗೂ ಇದರ ಗುತ್ತಿಗೆ ಮೊತ್ತ ಎಷ್ಟು;

ಊ) ಕಳಪೆ ಎಂದು ಕಂಡು ಬಂದಿದ್ದಲ್ಲಿ ಇವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ಒದಗಿಸುವುದು) ?

ಶ್ರೀ ಡಾ॥ ಹೆಚ್. ಸಿ. ಮಹದೇವಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು.

ಅ) ಹುಳಿಯಾರು ಹೋಬಳಿ, ಯಳನಡು ಗ್ರಾಮದ ಮುಂದಿನ ಕೆರೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.

ಆ) ಕಾಮಗಾರಿಯನ್ನು 2003–04ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಕಾಮಗಾರಿ ಸೆಪ್ಟೆಂಬರ್ 2003ರ ಅಂತ್ಯಕ್ಕೆ ಪೂರ್ಣಗೊಂಡಿರುತ್ತದೆ.

ಇ) ಈ ಕಾಮಗಾರಿಗೆ ಈ ಕೆಳಕಂಡ ಯೋಜನೆಗಳಲ್ಲಿ ಹಣವನ್ನು ಬಳಸಿಕೊಳ್ಳಲಾಗಿದೆ.

ಕ್ರಮ. ಸಂ.	ಯೋಜನೆಯ ವಿವರ	ಮೊತ್ತ (ರೂ. ಲಕ್ಷಗಳಲ್ಲಿ)
1.	ಬರಪರಿಹಾರ	7.30
2.	ಸಣ್ಣ ನೀರಾವರಿ–2702	2.71
3.	ಎಸ್. ಜೆ. ಆರ್. ವೈ.	3.70
	ಒಟ್ಟು	**13.71**

ಈ) ಸದರಿ ಕೆರೆ ಕಾಮಗಾರಿಯಲ್ಲಿನ ಕಳಪೆ ಕಾಮಗಾರಿಯ ಬಗ್ಗೆ ವರದಿ ಇರುವುದಿಲ್ಲ.

ಉ) ಈ ಕಾಮಗಾರಿಯನ್ನು ಇಲಾಖಾವತಿಯಿಂದ ನಿರ್ವಹಿಸಲಾಗಿದ್ದು, ಖರ್ಚಾಗಿರುವ ಮೊತ್ತ ರೂ. 13.71 ಲಕ್ಷಗಳು.

ಊ) ಅನ್ವಯಿಸುವುದಿಲ್ಲ.

5720, (6342) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬಿಡಿಎ ಮೂಲಕ ಬೆಂಗಳೂರಿನ ಬನಶಂಕರಿ 3ನೇ ಸ್ಟೇಜ್ ಬಡಾವಣೆ ರಚನೆಗಾಗಿ ಕಾನೂನಿನ್ವಯ ವಶಪಡಿಸಿ ಕೊಂಡ ಒಟ್ಟು 1305–03 ಎಕರೆ ಪ್ರದೇಶದ ಜಮೀನಿನಲ್ಲಿ ಇನ್ನೂ ಹಂಚಿಕೆ ಯಾಗದೆ ಉಳಿದಿರುವ ಭೂಮಿಯ ವಿಸ್ತೀರ್ಣವೆಷ್ಟು;

ಆ) ಈ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಸರಕಾರ ಬಳಸಿಕೊಳ್ಳಲಿದೆ;

ಇ) ಅವಲಹಳ್ಳಿ ಗ್ರಾಮದ ಸರ್ವೆ ನಂ. 31ರಲ್ಲಿ 1–30 ಎಕರೆ ಪ್ರದೇಶದಲ್ಲಿ ಸ್ವಾಧೀನಪಡಿಸಿಕೊಂಡ ಸಮಯದಲ್ಲಿ ಎಷ್ಟು ಅನಧಿಕೃತ ಕಟ್ಟಡಗಳು ಇದ್ದುವು;

ಈ) ಈಗ ಎಷ್ಟು ಅನಧಿಕೃತ ಕಟ್ಟಡಗಳು ಇವೆ;

ಉ) ಅನಧಿಕೃತ ಕಟ್ಟಡಗಳನ್ನು ಅಧಿಕೃತ ಕಟ್ಟಡಗಳು ಎಂದು ಘೋಷಣೆ ಮಾಡಲಾಗಿದೆಯೇ;

ಊ) ಈ ಕುರಿತು ಈಗ ಬಿಡಿಎ ವ್ಯಾಪ್ತಿಯ ಕಾನೂನಿನ ಕ್ರಮಗಳ ವಿವರಗಳೇನು ಹಾಗೂ ಸದರಿ ಸ್ಥಳದಲ್ಲಿರುವ ಕಟ್ಟಡಗಳೆಲ್ಲವೂ ಅನಧಿಕೃತವಾಗಿಯೇ

ಉಳಿದುಕೊಂಡಿವೆಯೇ;

ಋ) 1–30 ಎಕರೆ ಪ್ರದೇಶದಲ್ಲಿ ಈಗ ಎಷ್ಟು ಪ್ರದೇಶ ಖಾಲಿ ಇದೆ;

ಎ) ಬಡಾವಣೆಯನ್ನು ಅನಧಿಕೃತ ಕಟ್ಟಡಗಳು ಇದ್ದುವು ಎಂಬ ಕಾರಣಕ್ಕಾಗಿ ರಚಿಸಲಿಲ್ಲ ಎನ್ನುವ ಬಿಡಿಎ ರವರ ಹೇಳಿಕೆಯು ನ್ಯಾಯಾ ಸಮ್ಮತವೇ;

ಏ) ಹಾಗಿದ್ದಲ್ಲಿ, ಅಲ್ಲಿದ್ದ ನೋಂದಣಿ ಮಾಡಿಕೊಂಡ ನಿವೇಶನದಾರರಿಗೂ ಮನೆ ಕಟ್ಟಿಕೊಳ್ಳಲು ಅನುಮತಿ ನೀಡದಿರಲು ಕಾರಣಗಳೇನು, ಈ ಕುರಿತಾದ ಸರಕಾರದ ಸ್ಪಷ್ಟೀಕರಣಗಳೇನು;

ಐ) ಸದರಿ ಸರ್ವೆ ನಂಬರ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದ ನಿವೇಶನದಾರರಿಗೆ ಈಗಲಾದರೂ ಬಿಡಿಎ ರವರ ನೂತನ ನಿಯಮಗಳನ್ವಯ ನಿವೇಶನವನ್ನು ಮಂಜೂರು ಮಾಡಲಾಗುವುದೇ;

ಒ) ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಲು ಮತ್ತು ಸಾಮಾಜಿಕವಾಗಿ ಸಮಾನ ನ್ಯಾಯವನ್ನು ಒದಗಿಸಿಕೊಡುವಲ್ಲಿ ಸರಕಾರದ ನಿಲುವುಗಳೇನು;

ಶ್ರೀ ಧರ್ಮಸಿಂಗ್, ಮಾನ್ಯ ಮುಖ್ಯ ಮಂತ್ರಿಗಳು

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 1305 ಎಕರೆ 03 ಗುಂಟೆ ಜಮೀನನ್ನು ಬನಶಂಕರಿ 3ನೇ ಹಂತದ ಬಡಾವಣೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಅಂತಿಮ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಈ ಪೈಕಿ 616 ಎಕರೆ 19 ಗುಂಟೆ ಜಮೀನಿಗೆ ತೀರ್ಮ ರಚಿಸಿ, ಭೂಸ್ವಾಧೀನ ಪಡೆಯಲಾಗಿದೆ. 688 ಎಕರೆ 24 ಗುಂಟೆ ಜಮೀನಿನ ಭೂಸ್ವಾಧಿನ ಪಡೆದಿರುವುದಿಲ್ಲ.

ಆ) ಬಡಾವಣೆ ನಿರ್ಮಿಸಿ ಸಾರ್ವಜನಿಕರಿಗೆ ನಿವೇಶನಗಳನ್ನು ವಿತರಿಸಲು ಪ್ರಾಧಿಕಾರವು ಈ ಜಮೀನನ್ನು ಬಳಸಿ ಕೊಂಡಿದೆ.

ಇ) ಭೂಸ್ವಾಧೀನ ಪಡೆದ ಸಮಯದಲ್ಲಿ ಸದರಿ ಭೂಮಿ ಖಾಲಿಯಿದ್ದು ನಂತರ ಅನಧಿಕೃತ ಕಟ್ಟಡಗಳು ಬಂದಿರುವುದು ತಿಳಿದು ಬಂದಿರುತ್ತದೆ. ಆದಕಾರಣ ಈ ಜಮೀನಿನಲ್ಲಿ ಬಡಾವಣೆ ನಿರ್ಮಿಸಿರುವುದಿಲ್ಲ.

ಈ) ಈಗ 47 ಅನಧಿಕೃತ ಕಟ್ಟಡಗಳು ಇರುತ್ತವೆ.

ಉ) ಕಟ್ಟಡಗಳು ಅನಧಿಕೃತವಾಗಿಯೇ ಉಳಿದಿರುತ್ತವೆ.

ಊ) ಸದರಿ ಜಮೀನಿನಲ್ಲಿ ಕಟ್ಟಡಗಳು ಅನಧಿಕೃತವಾಗಿಯೇ ಉಳಿದಿರುತ್ತವೆ. ಪ್ರಾಧಿಕಾರದ ಇಂದಿನ ನಿಯಮಗಳ ಪ್ರಕಾರ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸಲು ಅವಕಾಶವಿರುವುದಿಲ್ಲ.

ಋ) 10 ಗುಂಟೆ ಪ್ರದೇಶ ಖಾಲಿ ಇರುತ್ತದೆ.

ಎ) ಬಡಾವಣೆ ನಿರ್ಮಾಣದ ಸಮಯದಲ್ಲಿ ಬಹಳಷ್ಟು ಪ್ರದೇಶದಲ್ಲಿ ಅನಧಿಕೃತ ಕಟ್ಟಡಗಳಿದ್ದ ಪ್ರಯುಕ್ತ ಬಡಾವಣೆಯನ್ನು ನಿರ್ಮಿಸಲು ಸಾಧ್ಯವಾಗಿಲ್ಲ.

ಏ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅನಧಿಕೃತ ಕಟ್ಟಡಗಳಿಗೆ ಯಾವುದೇ ಅನುಮತಿ ನೀಡಿರುವುದಿಲ್ಲ. ಅದರಂತೆ, ಪ್ರಾಧಿಕಾರದ ಕಾಯ್ದೆಯಲ್ಲಿ ಪ್ರಾಧಿಕಾರವು ಸ್ವಾಧೀನಪಡಿಸಿಕೊಂಡ ಜಮೀನಿನಲ್ಲಿ ನೋಂದಣಿ ಮಾಡಿಕೊಂಡ ನಿವೇಶನದಾರರಿಗೆ ಮನೆ ಕಟ್ಟಿಕೊಳ್ಳಲು ಅನುಮತಿ ನೀಡಲು ರಹಾ ಇರುವುದಿಲ್ಲ.

ಐ) ಹಾಲಿ ಪ್ರಾಧಿಕಾರದ ನಿಯಮಾವಳಿಯಲ್ಲಿ ನೋಂದಣಿ ಮಾಡಿ ಕೊಂಡಿರುವ ನಿವೇಶನದಾರರಿಗೆ ನಿವೇಶನ ಮಂಜೂರು ಮಾಡಲು ಅವಕಾಶ ವಿರುವುದಿಲ್ಲ.

ಒ) ಕಾನೂನಿಗೆ ಅನುಗುಣವಾಗಿ ಕ್ರಮವನ್ನು ಜರುಗಿಸಲಾಗುವುದು.

5721. (6334) ಶ್ರೀ ಕೃಷ್ಣಪ್ಪ ಎಂ. ಟಿ. (ತುರುವೇಕೆರೆ) :– ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು, ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಕೆರೆ ಹೂಳೆತ್ತುವ ಕಾರ್ಯಕ್ರಮದಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಎಷ್ಟು ಕೆರೆಗಳನ್ನು ಗುರ್ತಿಸಲಾಗಿದೆ; ಒಟ್ಟು ಮೊತ್ತ ಎಷ್ಟು;

ಆ) ತುರುವೇಕೆರೆ ಕ್ಷೇತ್ರದ ಕೆರೆ ಹೂಳೆತ್ತುವ ಕಾರ್ಯಕ್ರಮಕ್ಕೆ ನಿಗದಿಪಡಿಸಿದ ಹಣವೆಷ್ಟು;

ಇ) ಯಾವಾಗ ಕೆಲಸ ಪ್ರಾರಂಭಿಸಿ ಮುಗಿಸಲಾಗುವುದು;

ಶ್ರೀ ಮಲ್ಲಿಕಾರ್ಜುನ ಖರ್ಗೆ, ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು.

ಅ) ಪ್ರತ್ಯೇಕವಾಗಿ ಕೆರೆ ಹೂಳೆತ್ತುವ ಕಾರ್ಯಕ್ರಮವನ್ನು ನಬಾರ್ಡ್ ಯೋಜನೆಯಡಿಯಲ್ಲಿ ತೆಗೆದುಕೊಂಡಿರುವುದಿಲ್ಲ.

ಆ) ನಿಗದಿಪಡಿಸಿಲ್ಲ.

ಇ) ಉದ್ಭವಿಸುವುದಿಲ್ಲ.

5722. (6335) ಶ್ರೀ ಎಂ. ಟಿ. ಕೃಷ್ಣಪ್ಪ. (ತುರುವೇಕೆರೆ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗಾಂಧಿನಗರದ ಮೊದಲನೇ ಮುಖ್ಯರಸ್ತೆಯನ್ನು ಅಗಲಗೊಳಿಸಿ ಹಳೇ ಸೆಂಟ್ರಲ್ ಜೈಲ್ ಹಿಂಭಾಗ ಕಾರು ನಿಲುಗಡೆ, ಪ್ರೈವೇಟ್ ಬಸ್ ನಿಲುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಆ) ಈ ಪ್ರತಿಷ್ಟಿತ ಪ್ರದೇಶದಲ್ಲಿ ಸಾರ್ವಜನಿಕರಿಗೆ ಮೂತ್ರ ವಿಸರ್ಜನೆ ಮತ್ತು ಸಾರ್ವಜನಿಕ ಶೌಚಾಲಯ ಸೌಲಭ್ಯವಿಲ್ಲದೆ ಸಾರ್ವಜನಿಕರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಪ್ರದೇಶದಲ್ಲಿ ಹೆಂಗಸರಿಗೆ ಮತ್ತು ಗಂಡಸರಿಗೆ ಪ್ರತ್ಯೇಕ ಪ್ರತ್ಯೇಕವಾಗಿ ನಾಲ್ಕು ಮೂಲೆಯಲ್ಲಿ ಶೌಚಾಲಯವನ್ನು ನಿರ್ಮಿಸಿ, ಕಾರು, ಬಸ್ಸು, ಶಾಪಿಂಗ್ ಕಾಂಪ್ಲೆಕ್ಸ್ ಮಾಡಿದ್ದಲ್ಲಿ ಸರ್ಕಾರದ ಬೊಕ್ಕಸಕ್ಕೆ ಲಾಭ ತರುವುದಿಲ್ಲವೇ;

ಶ್ರೀ ಧರ್ಮಸಿಂಗ್, ಮಾನ್ಯ ಮುಖ್ಯಮಂತ್ರಿಗಳು

ಅ) ಗಾಂಧಿನಗರ ಮೊದಲನೇ ಮುಖ್ಯರಸ್ತೆಯನ್ನು ಅಗಲ ಗೊಳಿಸು ಉದ್ದೇಶಿಸಲಾಗಿರುತ್ತದೆ. ಈ ರಸ್ತೆಯನ್ನು ಕೆಂಪೇಗೌಡ ರಸ್ತೆಯಿಂದ ಶೇಷಾದ್ರಿ ರಸ್ತೆವರೆಗೆ 24 ಮೀಟರ್ ಅಗಲಕ್ಕೆ ವಿಸ್ತರಿಸಲು ಉದ್ದೇಶಿಸಲಾಗಿರುತ್ತದೆ. ಹಳೆಯ ಸೆಂಟ್ರಲ್ ಜೈಲ್ ಹಿಂಭಾಗದ ಕಾರು ನಿಲುಗಡೆ ಬಸ್ ನಿಲ್ದಾಣ ಮಾಡುವ ಪ್ರಸ್ತಾವನೆಯು ಇರುವುದಿಲ್ಲ.

ಸದರಿ ಪ್ರದೇಶವನ್ನು ಫ್ರೀಡಂ ಪಾರ್ಕ್ ಆಗಿ ಅಭಿವೃದ್ಧಿಪಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಈ ಪ್ರದೇಶಕ್ಕೆ ಹೊಂದಿಕೊಂಡಿರುವ ಸ್ಥಳಗಳಲ್ಲಿ ಶೌಚಾಲಯಗಳು ಲಭ್ಯವಿದ್ದು ಸಾರ್ವಜನಿಕರು ಉಪಯೋಗಿಸಬಹುದು.

ಇ) ಇಂತಹ ಪ್ರಸ್ತಾವನೆ ಇರುವುದಿಲ್ಲ.